## ಶುದ್ಧಾತ್ಮ



ಯಾವುದು ಶುದ್ಧ ಆತ್ಮವೋ ಅದು ನಿರ್ಲಿಪ್ತವಾದುದು. ಅದರಲ್ಲಿ ಮಾಯೆ ಇದ್ದರೂ ಆ ಮಾಯೆಯಿಂದ ಅದು ಕಲುಷಿತವಾಗುವುದಿಲ್ಲ. ಬೆಂಕಿಗೆ ನೀಲಿ ಉಂಡೆ ಬಿಸಾಡಿದರೆ ನೀಲಿ ಬಣ್ಣದ ಉರಿ ಏಳುತ್ತದೆ. ಕೆಂಪು ಉಂಡೆ ಬಿಸಾಡಿದರೆ ಕೆಂಪು ಬಣ್ಣದ ಉರಿ ಏಳುತ್ತವೆ. ಆದರೆ, ಬೆಂಕಿಗೆ ತನ್ನದೇ ಆದ ಯಾವ ಬಣ್ಣವೂ ಇಲ್ಲ.

ನೀರಿಗೆ ನೀಲಿ ಬಣ್ಣ ಕದಡಿದರೆ ಅದು ನೀಲಿಯಾಗಿ ಕಾಣುತ್ತದೆ. ಮತ್ತೆ ಅದಕ್ಕೇನೆ ಸ್ಫಟಿಕ ಹಾಕಿದರೆ ಅದು ತನ್ನ ಸ್ವಸ್ವರೂಪವನ್ನು ಪಡೆಯುತ್ತದೆ.

ಒಬ್ಬ ಚಂಡಾಲ ಮಾಂಸದ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದ. ಆತ ಶ್ರೀಶಂಕರಾಚಾರ್ಯರನ್ನು ಮುಟ್ಟಿಬಿಟ್ಟ. ಶಂಕರಾಚಾರ್ಯರು ರೇಗಿದರು, "ಏನು, ನನ್ನನ್ನು ಮುಟ್ಟಿಬಿಟ್ಟೆಯಲ್ಲ?" ಅಂತ. ಚಂಡಾಲ ಉತ್ತರವಿತ್ತ, "ಪೂಜ್ಯರೆ, ನಾನು ನಿಮ್ಮನ್ನು ಮುಟ್ಟಲಿಲ್ಲ, ನೀವೂ ನನ್ನನ್ನು ಮುಟ್ಟಲಿಲ್ಲ. ನೀವು ಶುದ್ಧ ನಿರ್ಲಿಪ್ತ ಆತ್ಮ" ಎಂದು. ಜಡಭರತ ಇದೇ ಮಾತನ್ನು ರಾಜ ರಾಹುಗಣನಿಗೆ ಹೇಳಿದ : "ಶುದ್ಧ ಆತ್ಮ ನಿರ್ಲಿಪ್ತವಾದದ್ದು. ಅದನ್ನು ಕಣ್ಣಿನಿಂದ ನೋಡಲಾಗುವುದಿಲ್ಲ. ನೀರಿನಲ್ಲಿ ಉಪ್ಪು ಬೆರೆತು ಕೊಂಡಿದ್ದರೆ, ಅದನ್ನು ಕಣ್ಣಿನಿಂದ ನೋಡಲಾಗುವುದಿಲ್ಲ."

ಯಾವುದು ಶುದ್ಧ ಆತ್ಮವೊ, ಅದೇ ಮಹಾಕಾರಣ—ಕಾರಣದ ಕಾರಣ. ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ. ಪಂಚಭೂತ ಸ್ಥೂಲ; ಮನಸ್ಸು, ಬುದ್ಧಿ, ಅಹಂಕಾರ ಸೂಕ್ಷ್ಮ. ಪ್ರಕೃತಿ ಅಥವಾ ಆದ್ಯಾಶಕ್ತಿ ಎಲ್ಲದರ ಕಾರಣ. ಬ್ರಹ್ಮ ಅಥವಾ ಶುದ್ಧ ಆತ್ಮ, ಕಾರಣದ ಕಾರಣ.

ಈ ಶುದ್ಧ ಆತ್ಮವೇ ನಮ್ಮ ಸ್ವಸ್ವರೂಪ. ಯಾವುದಕ್ಕೆ ಜ್ಞಾನ ಎಂದು ಹೆಸರು? ಈ ಸ್ವಸ್ವರೂಪವನ್ನು ಅರಿತುಕೊಳ್ಳುವುದು ಮತ್ತು ಅದರಲ್ಲಿಯೇ ಮನಸ್ಸನ್ನಿಡುವುದು.

ಮಾರ್ವಾಡಿ ಭಕ್ತ : "ಹೇ ಭಗವಂತ! ನಾನು ನಿನ್ನ ದಾಸ ಎಂದು ಹೇಳುತ್ತಿರುವ ಈ ನಾನು ಎಂಬುದು ಯಾವುದು?"

ಶ್ರೀರಾಮಕೃಷ್ಣರು : "ಲಿಂಗಶರೀರ ಅಥವಾ ಜೀವಾತ್ಮ. ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಈ ನಾಲ್ಕೂ ಸೇರಿ ಲಿಂಗ ಶರೀರವಾಗಿದೆ."

ಮಾರ್ವಾಡಿ ಭಕ್ತ : "ಜೀವಾತ್ಮ ಎಂಬುದು ಯಾವುದು?"

ಶ್ರೀರಾಮಕೃಷ್ಣರು : "ಅಷ್ಟಪಾಶಬಂಧಿತ ಆತ್ಮ. ಚಿತ್ತ ಎಂಬುದು ಯಾವುದು? ಯಾವುದರಿಂದ ಅಹಂ ಉದ್ಭವವಾಗುವುದೊ ಅದು."

ಮಾರ್ವಾಡಿ ಭಕ್ತ : "ಒಳ್ಳೆಯದು, ಮಹಾರಾಜ್, ವಿಷಯಗಳನ್ನು ಕಂಡರೆ ನಮಗೇಕೆ ವೈರಾಗ್ಯ ಉಂಟಾಗುವುದಿಲ್ಲ?"

ಶ್ರೀರಾಮಕೃಷ್ಣರು : "ಮಾಯೆ ಎಂಬುದು ಇದೇನೆ. ಮಾಯೆಯ ದೆಸೆಯಿಂದ ಸತ್ ಅಸತ್ತಾಗಿಯೂ ಅಸತ್ ಸತ್ತಾಗಿಯೂ ಕಾಣಿಸಿಕೊಳ್ಳುತ್ತದೆ. ಸತ್ ಅಂದರೆ ನಿತ್ಯವಾದದ್ದು—ಪರಬ್ರಹ್ಮ. ಅಸತ್ ಅಂದರೆ ಅನಿತ್ಯವಾದದ್ದು—ಸಂಸಾರ."

ಕಾಮಕಾಂಚನದ ಮನೆಯನ್ನು ಬಿಟ್ಟು, ಸ್ವಲ್ಪ ಹೊರಗೆ ನಿಂತರೆ—ಹೊರಗೆ ನಿಂತು ಸ್ವಲ್ಪ ಸಾಧನೆ, ತಪಸ್ಸು ಮಾಡಿದರೆ, ಆಗ ಮನಸ್ಸಿನ ಅಂಧಕಾರ ನಾಶವಾಗುತ್ತದೆ, ಅಹಂಕಾರವೆಂಬ ಅವಿದ್ಯಾ ಮೋಡ ಸುಟ್ಟು ಭಸ್ಮವಾಗುತ್ತದೆ. ಆಗ ಜ್ಞಾನ ಪ್ರಾಪ್ತಿಯಾಗುತ್ತದೆ. ಕಾಮಕಾಂಚನವೇ ಆ ಮೋಡ.

ಭಗವಂತನೊಬ್ಬನೇ ಸತ್, ಉಳಿದುದೆಲ್ಲ ಅಸತ್ ಎಂದು ಅರಿತುಕೊಳ್ಳುವುದಕ್ಕೆ ಜ್ಞಾನ ಎಂದು ಹೆಸರು. ಯಾವುದನ್ನು ಸತ್ ಎನ್ನುತ್ತೇವೊ ಅದರ ಇನ್ನೊಂದು ಹೆಸರು 'ಬ್ರಹ್ಮ' ಎಂದು; ಅದರ ಮತ್ತೊಂದು ಹೆಸರು 'ಕಾಲ' ಎಂದು. ಅದಕ್ಕಾಗಿಯೇ ಜನರು ಹೇಳುತ್ತಾರೆ, 'ಅಣ್ಣಂದಿರಾ! ಕಾಲಗರ್ಭದಲ್ಲಿ ಎಷ್ಟೊಂದು ಬಂದು ಹೋದುವು!' ಎಂದು.

ಆ ಸತ್‌ಸ್ವರೂಪ ಬ್ರಹ್ಮ ನಿತ್ಯ; ತ್ರಿಕಾಲದಲ್ಲಿಯೂ ಇದ್ದಾನೆ; ಆದಿ ಅಂತ್ಯರಹಿತ. ಆತನನ್ನು ಬಾಯಿಂದ ವರ್ಣಿಸಲು ಆಗುವುದಿಲ್ಲ. ಇಷ್ಟು ಮಾತ್ರ ಹೇಳಬಹುದು—ಅವನು ಚೈತನ್ಯ ಸ್ವರೂಪ, ಆನಂದ ಸ್ವರೂಪ ಎಂದು.

ಜಗತ್ತು ಅನಿತ್ಯ, ಆತ ನಿತ್ಯ. ಜಗತ್ತು ಇಂದ್ರಜಾಲ ಸ್ವರೂಪದ್ದು. ಐಂದ್ರಜಾಲಿಕನೆ ಸತ್ಯ, ಅವನ ಇಂದ್ರಜಾಲ ಅನಿತ್ಯ.

ಯಾವ ರೀತಿಯಾಗಿ ಹೂವಿನ ಗಂಧ ಮೂಗಿಗೆ ಪ್ರತ್ಯಕ್ಷವಾಗುತ್ತದೆಯೊ, ಅದೇರೀತಿಯಾಗಿ ಭಗವಂತ ಮನಸ್ಸಿಗೆ ಪ್ರತ್ಯಕ್ಷನಾಗುತ್ತಾನೆ. ಅದು ಈ ಮನಸ್ಸಿಗೆ ಅಲ್ಲ; ಶುದ್ಧ ಮನಸ್ಸಿಗೆ. ಆಗ ಈ ಮನಸ್ಸು ಇರದು. ವಿಷಯಾಸಕ್ತಿ ಒಂದು ಕಿಂಚಿತ್ತು ಇದ್ದರೂ ಅದು ಶುದ್ಧ ಮನಸ್ಸಾಗದು.

ಯಾವಾಗ ಮನಸ್ಸು ಪರಿಶುದ್ಧವಾಗುತ್ತದೆಯೊ, ಆಗ ಅದನ್ನೇ ಶುದ್ಧ ಮನಸ್ಸು ಅಂತಲೂ ಹೇಳಬಹುದು, ಶುದ್ಧ ಆತ್ಮ ಅಂತಲೂ ಹೇಳಬಹುದು. ಶುದ್ಧಮನಸ್ಸು, ಶುದ್ಧ ಬುದ್ಧಿಯಿಂದ ಆತನ ದರ್ಶನವನ್ನು ಪಡೆಯಬಹುದು. ◆